# ಉಪಸಂಹಾರ

# ಉಪಸಂಹಾರ

"ಧರ್ಮೋ ರಕ್ಷತಿ ರಕ್ಷಿತಃ" ಎಂಬುದು ಭಾರತೀಯ ಧರ್ಮದ ಭೀಜಮಂತ್ರವಾಗಿದೆ. ನಾವು ಧರ್ಮವನ್ನು ರಕ್ಷಿಸಿದರೆ ಧರ್ಮ ನಮ್ಮನ್ನು ರಕ್ಷಿಸುತ್ತದೆ. ಅನೇಕ ಧರ್ಮಗಳು ಭಾರತೀಯ ಸಾಂಸ್ಕೃತಿಕ ಪರಂಪರೆಯಲ್ಲಿ ಉಗಮವಾಗಿರುವುದನ್ನು ನಾವು ಗಮನಿಸಬಹುದು. ಬೌದ್ಧ, ಜೈನ, ವೀರಶೈವ, ವೈಷ್ಣವ ಮುಂತಾದ ಧರ್ಮಗಳು ಈ ನಾಡಿನ ಜನರ ಜೀವನ ಮುಕ್ತಿಗೆ ನೆಮ್ಮದಿಗೆ, ಸಾರ್ಥಕತೆಗೆ ಕಾರಣವಾಗಿವೆ. ಈಧರ್ಮಗಳ ಸಾಧು ಸಂತರು ಜನರ ಒಳಿತಿಗಾಗಿ ತಮ್ಮನ್ನು ತಾವು ಜನಸೇವೆಯಲ್ಲಿ ತೊಡಗಿಸಿಕೊಂಡು ತನುಮನ ಧನಗಳನ್ನು ಅರ್ಪಿಸಿ ಸಮಾಜವನ್ನು ಉದ್ಧರಿಸಿದ್ದಾರೆ. ಇಂಥ ಅನೇಕ ಧರ್ಮಗಳು ಕಾಲಗರ್ಭದಲ್ಲಿ ಉದುಗಿಹೋಗಿವೆ. ಆದರೆ ಇಂದಿಗೂ ಜೀವಂತಿಕೆಯಿಂದ ಕಾಲಕಾಲಕ್ಕೆ ತಕ್ಕಂತೆ ಬದಲಾವಣೆ ಹೊಂದುತ್ತ ಸಮಾಜದ ಜೊತೆಗೆ ತಾನು ಬೆಳೆಯುತ್ತ 'ಸರ್ವೇಜನೋ ಸುಖಿನೋ ಭವಂತು' ಎಂದು ಸರ್ವಜನರನ್ನು ಸಮಾನವಾಗಿ ಕಾಣುತ್ತಿದ್ದ, ಕಾಣುತ್ತಿರುವ ಧರ್ಮವೇ ಈ ವೀರಶೈವ ಧರ್ಮ.

ಈ ಧರ್ಮವು ಇಂದು ವಿಶ್ವಧರ್ಮದ ಎಲ್ಲ ತತ್ವಗಳನ್ನು ಒಳಗೊಂಡಿದೆ. ಭಾರತದಲ್ಲಿ ಅದರಲ್ಲೂ ಕರ್ನಾಟಕದಲ್ಲಿರುವ ಅನೇಕ ಧರ್ಮ ಪೀಠಗಳಲ್ಲಿ ವೀರಶೈವ ಧರ್ಮಪೀಠ ಮೊದಲ ಸ್ಥಾನದಲ್ಲಿದೆ. ನಾವು ಅಧ್ಯಯನಮಾಡುವಾಗ ಸುಮಾರು ೫೦೦೦ (ಐದು ಸಾವಿರ)ಕ್ಕಿಂತಲೂ ಹೆಚ್ಚಿದ್ದ ವೀರಶೈವ ಮಠಗಳ ಕ್ರಮೇಣ ನಶಿಸಿಹೋಗಿ ಇಂದು ಕೇವಲ ಸಾವಿರದ ಲೆಕ್ಕಚಾರದಲ್ಲಿ ಕಂಡುಬರುತ್ತವೆ. ಅದರಲ್ಲೂ ಮೈಸೂರು ಪ್ರಾಂತ್ಯದಲ್ಲಿ ನೂರರಿಂದ ನೂರೈವತ್ತರಷ್ಟು ಮಠಗಳಿದ್ದು ಇಂದು೧೦೬ಮಠಗಳು ಕಂಡುಬಂದಿದೆ. ಈಮಠಗಳಲ್ಲೂ ಕೆಲವು ಮಠಗಳು ಸಾಮಾಜಿಕವಾಗಿ, ಶೈಕ್ಷಣಿಕವಾಗಿ, ಧಾರ್ಮಿಕವಾಗಿ, ಸಾಹಿತ್ಯಿಕವಾಗಿ ಸಮಾಜದ ಏಳಿಗೆಯಲ್ಲಿ ಪ್ರಮುಖ ಪಾತ್ರವಹಿಸುತ್ತಿವೆ.ಉಳಿದವು ಧಾರ್ಮಿಕ ಆಚರಣೆಗೆ ಮಾತ್ರ ಸೀಮಿತವಾಗಿವೆ.

ಪ್ರಸ್ತುತ ನನ್ನ ಸಂಶೋಧನಾ ಕಾರ್ಯವ್ಯಾಪ್ತಿ **"ಮೈಸೂರು ಜಿಲ್ಲೆಯ ವೀರಶೈವ ಮಠಗಳ : ಸಾಂಸ್ಕೃತಿಕ ಅಧ್ಯಯನ"** ನಾನು ಸಂಶೋಧನೆ ಮಾಡಲು ಇಚ್ಚಿಸುತ್ತಿದ್ದ ವಿಷಯಗಳು ಹನ್ನೆರಡನೇ ಶತಮಾನದಲ್ಲಿ ಕ್ರಾಂತಿ ಮಾಡಿದಂತ ವಚನಕಾರ್ತಿಯರ ಬಗ್ಗೆ ಆದರೆ ನಾನು ಮಾರ್ಗದರ್ಶಕನ್ನು ಭೇಟಿ ಮಾಡಿದ ಸಂದರ್ಭದಲ್ಲಿ ನನ್ನಲ್ಲಿರುವ ಧಾರ್ಮಿಕ ಚಿಂತನೆಗಳನ್ನು ಗಮನಿಸಿ ಅದಕ್ಕೆ ಸವಾಲೆನಿಸುವಂತಹ ಕ್ಷೇತ್ರದಲ್ಲಿ ಸಂಶೋಧನೆ ಮಾಡಲು ಪ್ರೇರಣೆ ನೀಡಿದವರು ಡಾ.ಎಂ.ನಂಜಯ್ಯ ಹೊಂಗನೂರರು. ನಂತರದಲ್ಲಿ ನಾನು ಮೈಸೂರು ಜಿಲ್ಲೆಯಲ್ಲಿರುವ ಅನೇಕ ಧರ್ಮದ ಮಠಗಳಲ್ಲಿ

ಐತಿಹಾಸಿಕ ಹಿನ್ನೆಲೆಯುಳ್ಳ ಮತ್ತು ಸಾಮಾಜಿಕ, ಧಾರ್ಮಿಕ ಕ್ಷೇತ್ರದಲ್ಲಿ ತಮ್ಮನ್ನು ತೊಡಗಿಸಿಕೊಂಡಿರುವ ವೀರಶೈವ ಮಠಗಳ ಬಗ್ಗೆ ಅಧ್ಯಯನ ಮಾಡಲು ಪ್ರಾರಂಭಿಸಿದೆ.

ವೀರಶೈವ ಮಠಗಳ ಬಗ್ಗೆ ಅಧ್ಯಯನ ಮಾಡುವುದಕ್ಕಿಂತ ಮೊದಲು ಮಠಗಳ ಹಿನ್ನೆಲೆ, ಉಗಮ, ವಿಕಾಶದ ಬಗ್ಗೆ ಅಧ್ಯಯನ ಮಾಡಲು ಹೊರಟಾಗ ಮಠ ಮತ್ತು ವೀರಶೈವ ಧರ್ಮದ ಬಗ್ಗೆ ಮೂಲವನ್ನು ಸೂಕ್ಷ್ಮವಾಗಿ ಅಭ್ಯಸಿಸಿ ಅವಲೋಕನ ಮಾಡಲಾಗಿದೆ. ಮೈಸೂರು ಜಿಲ್ಲೆ ಕರ್ನಾಟಕದಲ್ಲಿ ಹಿಂದೆ ರಾಜ್ಯದ ಹೆಸರಾಗಿ ನಂತರ ಜಿಲ್ಲೆಯಾಗಿ ಇಂದು ಸಾಂಸ್ಕೃತಿಕ ರಾಜಧಾನಿಯಾಗಿ, ಪೌರಾಣಿಕ ಮತ್ತು ಇತಿಹಾಸ ಉಳ್ಳ ಜಿಲ್ಲೆಯಾಗಿದೆ. ಈ ಜಿಲ್ಲೆಯಲ್ಲಿ ಪ್ರಸ್ತುತ ಏಳು ತಾಲ್ಲೂಕುಗಳಿದ್ದು ಪುರಾಣ ಪ್ರಸಿದ್ಧವಾಗಿವೆ. ಮೂಲತಃ ಹಲವಾರು ರಾಜಮನೆತನಗಳಿಗೆ ಆಶ್ರಯ ನೀಡಿರುವ ಈ ಜಿಲ್ಲೆ ಧಾರ್ಮಿಕ ಕ್ಷೇತ್ರದಲ್ಲಿ ಪ್ರಮುಖ ಪಾತ್ರವಹಿಸುತ್ತದೆ. ಅದರಲ್ಲಿಯು ಧಾರ್ಮಿಕ ಕ್ಷೇತ್ರದಲ್ಲಿ ಜಿಲ್ಲೆಯ ವೀರಶೈವ ಮಠಗಳು ನೀಡಿರುವ ಕೊಡುಗೆ ಅನನ್ಯ. ಈ ಜಿಲ್ಲೆಯಲ್ಲಿ ಮೂಲತಃ ಸುಮಾರು ೧೫೦ ಕ್ಕಿಂತಲೂ ಹೆಚ್ಚು ವೀರಶೈವ ಮಠಗಳಿದ್ದು ನಂತರದ ದಿನಗಳಲ್ಲಿ ಮಠಗಳು ಕಾಲದ ಹೊಡೆತಕ್ಕೆ ಸಿಲುಕಿ ಕೆಲವು ಮಠಗಳು ನಾಶವಾಗಿ ಕೆಲವು ಇನ್ನುಳಿದ ಕೆಲವು ಮಠಗಳು ಬರೀ ಅವಶೇಷಗಳಾಗಿ ಕುರುಹುಗಳಾಗಿರುವ ದೃಶ್ಯ ಕಂಡುಬರುತ್ತದೆ. ವರ್ತಮಾನದಲ್ಲಿ ನೂರಕ್ಕಿಂತಲೂ ಹೆಚ್ಚು ಮಠಗಳು ಕ್ರಿಯಾಶೀಲವಾಗಿದ್ದು ಅವುಗಳಲ್ಲಿ ಬೆರಳೆಣಿಕೆಯಷ್ಟು ಮಠಗಳು ಮಾತ್ರ ಜ್ಞಾನ್ನಾನ್ನ-ತ್ರಿವಿಧದಾಸೋಹ ನೀಡುತ್ತಿರುವ ಮಠಗಳಾಗಿವೆ. ಅಲ್ಲದೆ ಇಲ್ಲಿ ಇಡೀ ಜಿಲ್ಲೆಯಲ್ಲಷ್ಟೆ ಅಲ್ಲದೆ ರಾಷ್ಟ್ರಮಟ್ಟದಲ್ಲಿ ವಿಶ್ವಪ್ರಸಿದ್ಧವಾದ ಶ್ರೀ ಸುತ್ತೂರುಮಠವಿದೆ. ಇದಲ್ಲದೆ ಶ್ರೀಗುರುಮಲ್ಲೇಶ್ವರ ದಾಸೋಹ ಮಠ, ಶ್ರೀ ಹೊಸಮಠ, ಶ್ರೀವಾಟಾಳುಮಠ, ಬೆಟ್ಟದಪುರದಮಠ, ಮಾಡ್ರಳ್ಳಿಮಠ, ಜಿಲ್ಲೆಯ ಏಳುತಾಲೋಕುಗಳಲ್ಲಿ ಈ ವೀರಶೈವ ಮಠಗಳು ತಮ್ಮದೆ ಆದಂತಹ ವಿಶಿಷ್ಟ ಸಮಾಜ ಮುಖಿ ಸೇವೆಗಳಿಂದ ಭಕ್ತ ಸಮುದಾಯಗಳನ್ನು ಜಾತಿ ಮತಬೇದವಿಲ್ಲದೆ ತಮ್ಮತ್ತ ಸೆಳೆದುಕೊಳ್ಳುತ್ತಿವೆ.

ಈ ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಇದುವರೆವಿಗೂ ಗಂಭೀರವಾದ ಚಿಂತನೆಗಳಾಗಲಿ ಅಥವಾ ಆಳವಾದ ಅಧ್ಯಯನಗಳಾಗಲಿ ನಡೆದಿಲ್ಲದ ಕಾರಣ ನಾನು ಈ ವಿಷಯವನ್ನು ಸಂಶೋಧನಾ ಮಟ್ಟದಲ್ಲಿ ಸ್ವೀಕರಿಸಿ ಅಧ್ಯಯನ ಮಾಡಿದ್ದೇನೆ. ಅಧ್ಯಯನ ಮಾಡುವ ಸಂದರ್ಭದಲ್ಲಿ ಕಂಡ ಫಲಿತಗಳನ್ನು ನಾವಿಲ್ಲಿ ಗಮನಿಸಬಹುದು. ಜಿಲ್ಲೆಯಲ್ಲಿನ ಮಠಗಳ ಐತಿಹಾಸಿಕ, ಸಾಮಾಜಿಕ ಮತ್ತು ಧಾರ್ಮಿಕ, ಸಾಹಿತ್ಯಕ, ಶೈಕ್ಷಣಿಕ ಮತ್ತು ಬದಲಾಗುತ್ತಿರುವ ಸಂದರ್ಭದಲ್ಲಿ ಮಠಗಳ ಪಾತ್ರಗಳನ್ನು ಕುರಿತು ನಾವು ಇಲ್ಲಿ ಗಮನಿಸಿದ್ದೇನೆ.

ಮೈಸೂರು ಇತಿಹಾಸದ ಪೌರಾಣಿಕ ಮತ್ತು ಸಾಂಸ್ಕೃತಿಕ ಹಿನ್ನೆಲೆಯು ಸಾಕಷ್ಟು ವಿಸ್ತೃತವಾಗಿದ್ದು ಅದನಿಲ್ಲಿ ಸಂಕ್ಷಿಪ್ತವಾಗಿ ನಿರೂಪಿಸಲಾಗಿದೆ. ಮತ್ತು ಮೈಸೂರು ಜಿಲ್ಲೆಯಲ್ಲಿರುವ ಎಷ್ಟೋ ಮಠಗಳು ಚಿರಪರಿಚಿತವಲ್ಲದಿದ್ದವು, ಅವುಗಳನ್ನು ಬೆಳಕಿಗೆ ತರುವುದರ ಜೊತೆಗೆ ಅವುಗಳ ಉಗಮ ವಿಕಾಶದ ಬಗ್ಗೆ ಸ್ಥೂಲ ಮತ್ತು ಕೆಲವೆಡೆ ಸಂಕ್ಷಿಪ್ತವಾಗಿ ಗಮನಹರಿಸಲಾಗಿದೆ. ವೀರಶೈವ ಧರ್ಮದ ಉಗಮ ವಿಕಾಶವನ್ನು ಕುರಿತು ಚರ್ಚಿಸಲಾಗಿದೆ. ಮೂಲದಲ್ಲಿ 'ಮಠ' ಹೇಗೆ ಉಗಮವಾಯಿತು ಗುರುವರ್ಗದ ಮಠಗಳ, ವಿರಕ್ತವರ್ಗದ ಮಠಗಳು ಮತ್ತು ದಾಸೋಹ ಮಠಗಳು, ಪಟ್ಟದ ಮಠಗಳು ಮುಂತಾದವುಗಳ ಬಗ್ಗೆ ಚರ್ಚಿಸಿತ್ತ, ಪಂಚಾಚಾರ್ಯರ ವಿವರಣೆ ನೀಡಲಾಗಿದೆ. ಮಠಗಳು ಚಿಂತನೆ ದಾಸೋಹ ಕೇಂದ್ರಗಳಾಗಿ ಸಾಂಸ್ಕೃತಿಕ ಕೇಂದ್ರಗಳಾಗಿ ಆರೋಗ್ಯಕೇಂದ್ರಗಳಾಗಿ ಮತ್ತು ಜನನ ಮರಣಗಳಿಗೆ ಅನುಗುಣವಾಗಿ ಪೂಜಾ ಸಂಸ್ಕಾರ ಕೇಂದ್ರಗಳಾಗಿ ಸೇವೆ ಸಲ್ಲಿಸುತ್ತಿರುವುದನ್ನು ಈ ಮಹಾಪ್ರಬಂಧವನ್ನು ಅಭ್ಯಸುವುದರ ಮೂಲಕ ಅರಿಯಬಹುದು.

ಈ ವೀರಶೈವ ಮಠಗಳು ಧಾರ್ಮಿಕವಾಗಿ ಸಮಾಜಕ್ಕೆ ನೀಡಿರುವಂತಹ ಬಹುದೊಡ್ಡ ಕೊಡುಗೆ ಎಂದರೆ ಸಾಮೂಹಿಕ ದೀಕ್ಷಾ ಕಾರ್ಯಕ್ರಮ, ಹಬ್ಬಹರಿದಿನಗಳ ಆಚರಣೆ, ಜಯಂತೋತ್ಸವಗಳು, ಧಾರ್ಮಿಕ ಪ್ರವಾಸಗಳು ಇವುಗಳ ಅಧ್ಯಯನ ಮೂಲಕ ಮಠಗಳು ವರ್ತಮಾನದ ಕಾರ್ಯಕ್ಷೇತ್ರವನ್ನು ತಿಳಿಯಬಯಸುವ ಪ್ರಯತ್ನ ಮಾಡಲಾಗಿದೆ.

ಮೈಸೂರು ಜಿಲ್ಲೆಯ ವೀರಶೈವ ಮಠಗಳು ಶೈಕ್ಷಣಿಕ ರಂಗದಲ್ಲಿ ಸಾಧಿಸಿದರುವ ಸೇವೆ ಅವಿಸ್ಮರಣೀಯ ಮತ್ತು ಅದ್ವಿತೀಯ, ಏಕೆಂದರೆ ಒಂದು ಸರ್ಕಾರವೇ ಮಾಡದಂತ ಕೆಲಸವನ್ನು ಈ ಮಠಗಳು ಮಾಡಿವೆ. ಸಮಾಜದ ಎಲ್ಲವರ್ಗದ ಜನತೆಗಾಗಿ ಎಲ್ಲಾ ತರಹದ ಶಾಲಾ-ಕಾಲೇಜುಗಳನ್ನು ಸ್ಥಾಪಿಸುವುದರ ಮೂಲಕ ವಿದ್ಯೆಗೆ ಹೆಚ್ಚಿನ ಮಹತ್ವ ನೀಡಿರುವುದನ್ನು ನಾವು ಅಧ್ಯಯನ ಮೂಲಕ ತಿಳಿಯಬಹುದು. ಇಲ್ಲಿ ನಮ್ಮ ಮೂಲ ಭಾಷೆಗಿಂತ ದೇಶೀಭಾಷೆಗೆ ಮಠಗಳು ಹೆಚ್ಚಿನ ಒಲವು ನೀಡಿ ಸಂಸ್ಕೃತ ಸಾಹಿತ್ಯದ ಉಳಿವಿಗೆ ಕಾರಣವಾಗಿದ್ದಾರೆ ಎಂಬುದನ್ನು ಅಭ್ಯಸಿಸಲಾಗಿದೆ. ಅಲ್ಲದೆ ಮುಂದೆ ಮಠಾಧೀಪತಿಗಳಾಗುವ ಬಾವಿಸನ್ಯಾಸಿ(ವಟು)ಗಳಿಗೆ ತರಬೇತಿ ನೀಡುವಂತ ಗುರುಕುಲಗಳನ್ನು ಸ್ಥಾಪಿಸಿ ಸಮಾಜವನ್ನು ಮುನ್ನಡೆಸುವಂತ ಶಿಕ್ಷಿತ ಪೀಠಾಧಿಪತಿಗಳನ್ನು ರೂಪಿಸುತ್ತಿರುವುದು ಸಂಶೋಧನೆಯ ಸಂದರ್ಭದಲ್ಲಿ ಕಂಡುಬಂದಿದೆ. ಸಮಾಜ ಸದೃಢವಾಗಲು, ನಾಗರಿಕ ಸಮಾಜವಾಗಲು ಉನ್ನತ ಶಿಕ್ಷಣದ ಅವಶ್ಯಕತೆಯನ್ನು ಮನಗಂಡ ಅನೇಕ ಶ್ರೀಗಳು ಪದವಿ, ಸ್ನಾತಕೋತ್ತರಪದವಿ ಮತ್ತು ವೈದ್ಯಕೀಯ ಹಾಗೂ ತಾಂತ್ರಿಕ ಕಾಲೇಜುಗಳನ್ನು ಸ್ಥಾಪಿಸಿದರು. ಕೃಷಿ ಶಿಕ್ಷಣ ಮುಂತಾದ ಕ್ಷೇತ್ರಗಳಿಗೆ ಸಂಬಂಧಿಸಿದ ತರಬೇತಿ ಕೇಂದ್ರಗಳನ್ನು ಆರಂಭಿಸಿ ಆ ಮೂಲಕ

ಜನರ ನಿರುದ್ಯೋಗ ಸಮಸ್ಯೆಗೆ, ಸ್ವಉದ್ಯೋಗ ರೂಪುಗೊಳ್ಳಲು ಕಾರಣವಾಗಿರುವುದನ್ನು ಅಧ್ಯಯನ ಸಂದರ್ಭದಲ್ಲಿ ಗಮನಿಸಲಾಗಿದೆ. ಆದರೆ ಇತ್ತೀಚೆಗೆ ಬಡವರಿಗೆ ಉನ್ನತಶಿಕ್ಷಣ ತಾಂತ್ರಿಕ ಮತ್ತು ವೈದ್ಯಕೀಯ ಶಿಕ್ಷಣ ದುಭಾರಿಯಾಗುತ್ತವೆ. ಈ ಮಠಗಳ ಮಠಾಧೀಶರು ಬಡವರ್ಗದ ಪ್ರತಿಭಾವಂತ ವಿದ್ಯಾರ್ಥಿಗಳನ್ನು ಗುರುತಿಸಿ ಅವರಿಗೆ ಉಚಿತ ಶಿಕ್ಷಣ ಕೂಡುತ್ತಿದ್ದಾರೆ. ಇಂದು ಶಿಕ್ಷಣ ವಾಣಿಜ್ಜೀಕರಣಗೊಂಡಿದೆ ಇಂಥ ಸಂದರ್ಭದಲ್ಲಿ ರಾಜ್ಯದ ಮಠಾಧೀಶರು ಸರಿಯಾದ ನಿರ್ಧಾರ ಕೈಗೊಂಡು ಈಗ ನೀಡುತ್ತಿರುವ ಸೇವೆಯನ್ನು ಇನ್ನು ಹೆಚ್ಚಿನ ರೀತಿಯಲ್ಲಿ ಸಮಾಜಕ್ಕೆ ನೀಡಿ ಸಮಾಜಮುಖಿಯಾಗಿ ಬೆಳೆಯುತ್ತಿರುವುದನ್ನು ನಾವು ಕಾಣಬಹುದು. ಇದು ನಿಜಕ್ಕೂ ಶ್ಲಾಘನೀಯ ಮತ್ತು ಅಭಿನಂದನಾರ್ಹ. ಈ ಹಿನ್ನೆಲೆಯಲ್ಲಿ ಇಡಿ ಮೈಸೂರು ಜಿಲ್ಲೆಯಲ್ಲಿ ಹೆಚ್ಚಿನ ಶಿಕ್ಷಣ ಸಂಸ್ಥೆ, ಹೊಂದಿರುವ ಕೀರ್ತಿ ಶ್ರೀ ಸುತ್ತೂರು ಮಠಕ್ಕೆ ಸಲ್ಲುತ್ತದೆ. ಸಮಾಜದ ಕಡುಬಡವರ್ಗದ ಜನರಿಗಾಗಿ ಯಾವುದೇ ಜಾತಿಬೇಧವಿಲ್ಲದೆ ಶ್ರೀ ಕ್ಷೇತ್ರ ಸುತ್ತೂರಿನಲ್ಲಿ ಸುಮಾರು ೮೦೦೦ (ಎಂಟು ಸಾವಿರ) ಕ್ಕಿಂತಲೂ ಹೆಚ್ಚಿನ ವಿದ್ಯಾರ್ಥಿಗಳಿಗೆ ಉಚಿತ ವಸತಿ ಶಿಕ್ಷಣ ನೀಡುತ್ತಿರುವುದು ಹೆಮ್ಮೆಯ ವಿಚಾರ. ಈ ವಿಚಾರಗಳಿಗೆ ಸಂಬಂದಿಸಿದಂತೆ ಯಾವುದೆ ರೀತಿಯ ಗಮನ ನೀಡಿಲ್ಲವಾದ್ದರಿಂದ ನಮ್ಮ ಅಧ್ಯಯನ ಮೂಲಕ ಇಂಥ ಶ್ಲಾಘನೀಯ ಸೇವೆಗಳನ್ನು ಬೆಳಕಿಗೆ ತರುವ ಉದ್ದೇಶ ಸಫಲವಾಗಿದೆ ಎನ್ನಬಹುದು.

ಜಿಲ್ಲೆಯ ಮಠಗಳು ಪೀಠಾಧೀಪತಿಗಳು ಮತ್ತು ಅಲ್ಲಿನ ಕೆಲವು ಮಠವಾಸದವರು ಸಾಹಿತ್ಯಕವಾಗಿ ನೀಡಿರುವ ಕೊಡುಗೆ ಅನನ್ಯವಾದುದು ಹಿಂದಿನ ಮತ್ತು ಇಂದಿನ ಮಠಾಧಿಪತಿಗಳು ಬಹುಭಾಷಾ ಪಾಂಡಿತ್ಯವನ್ನು ಪಡೆದಿದ್ದರೆಂಬದಕ್ಕೆ ಅನೇಕ ಭಾಷಾಧಾರಗಳು ಮತ್ತು ಸಾಕ್ಷ್ಯಾಧಾರಗಳು ದೊರಕುತ್ತದೆ. ಶ್ರೀಸುತ್ತೂರುಮಠದ ೨೪ ತೀರ್ಥಂಕರಂತಿರುವ ೨೪ ಜನ ಪೀಠಾಧೀಪತಿಗಳಲ್ಲಿ ಬಹುಮಂದಿ ಜಗದ್ಗುರುಗಳು ಸಾಹಿತ್ಯ ರಚನೆ ಮತ್ತು ಪ್ರಸಾರದಲ್ಲಿ ತೊಡಗಿರುವುದನ್ನು ನಾವು ಗಮನಿಸಬಹುದು. ಅಲ್ಲದೆ ದೇವನೂರು ದಾಸೋಹಮಠ, ಪಂಚಗವಿಮಠ, ಶ್ರೀಹೊಸಮಠ, ಶ್ರೀಗವಿಮಠ, ಮತ್ತು ಕುಂದೂರುಮಠ ಅಲ್ಲದೆ ತಲಕಾಡು ಹಸ್ತೀಕೇರಿಮಠ ಇನ್ನು ಅನೇಕ ಮಠಾಧೀಶರು ಸಾಹಿತ್ಯ ರಚನೆ ಮಾಡುವುದರ ಜೊತೆಗೆ ನಮ್ಮ ಸಾಹಿತ್ಯ-ಸಂಸ್ಕೃತಿಯ ಪೋಷಕರು ಆಗಿರುವುದನ್ನು ಗಮನಿಸಬಹುದು. ಕೆಲವು ಮಠಾಧೀಶರು ಸಂಸ್ಕೃತ-ವೇದ ಪಾಂಡಿತ್ಯವನ್ನು ಪಡೆದು ಉಪನ್ಯಾಸಕರಾಗಿ, ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿದ್ದಾರೆ, ಸಲ್ಲಿಸುತ್ತಿದ್ದಾರೆ. ಜೊತೆಗೆ ಇಂದಿನ ಅನೇಕ ಶ್ರೀಗಳು ಹಿರಿಯ ಗುರುಗಳು ನಡೆದಂತಹ ಹಾದಿಯಲ್ಲೆ ನಡೆಯುತ್ತ ಮಹಾಕಾವ್ಯ, ಕಾವ್ಯ ಸಂಪಾದನ, ಮತ್ತು ಪ್ರಕಟಣಾ ಕಾರ್ಯದಲ್ಲಿ ತೊಡಗಿ ಸಾಹಿತ್ಯ ಸೇವೆಯು ಮಠಗಳಲ್ಲಿನ ಒಂದು ಪ್ರಮುಖ ಕಾರ್ಯವೆಂಬಂತೆ ನಿರ್ವಹಿಸುತ್ತಿದ್ದಾರೆ. ಕೆಲವು

ಮಠಗಳು ಸ್ವತಃ ತಾವೇ ಪ್ರಕಾಶನದ ಕಾರ್ಯವನ್ನು ನಿರ್ವಹಿಸಿ ವೀರಶೈವ ಧರ್ಮದ ಜೊತೆ ಇತರೆ ಧರ್ಮಗಳಿಗೆ ಸಂಬಂಧಿಸಿದ ಧಾರ್ಮಿಕ ಮತ್ತು ವೈಚಾರಿಕ ಕೃತಿಗಳ ಬರವಣಿಗೆ ಮತ್ತು ಪ್ರಕಟಣೆಗೆ ಪ್ರೋತ್ಸಾಹ ನೀಡಿ ಆಮೂಲಕ ನಮ್ಮ ಸಂಸ್ಕೃತಿಯ ಉಳಿವಿಗಾಗಿ ಶ್ರಮಿಸುತ್ತಿರುವುದನ್ನು ಕಾಣಬಹುದು.

ಇಷ್ಟೆಲ್ಲ ಅಧ್ಯಯನ ನಡೆಸಿದ ಮೇಲೆ ಮಠಗಳು ಆಧುನಿಕತೆಗೆ ತಕ್ಕಂತೆ ಹೇಗೆ ಹೊಂದಿಕೊಂಡಿವೆ ಎಂಬುದನ್ನು ಕೊನೆಯ ಅಧ್ಯಯನದಲ್ಲಿ ನಿರೂಪಿಸಲಾಗಿದೆ ಏಕೆಂದರೆ ಮೂಲದಲ್ಲಿನ ವೀರಶೈವ ಮಠಗಳಿಗೂ ಮಠಾಧಿಪತಿಗಳಿಗೂ ಇಂದಿನ ವೀರಶೈವ ಮಠಗಳಿಗೂ ಅನೇಕ ಸಾಮ್ಯ ವೈಷಮ್ಯಗಳು ಕಂಡುಬರುತ್ತವೆ. ಇಂದಿನ ಜಾಗತೀಕರಣ, ವಾಣಿಜ್ಯಕರಣ, ಆಧುನಿಕತೆ, ಜೊತೆಗೆ ಮಾಧ್ಯಮಗಳ ಅಬ್ಬರ ಇವುಗಳ ನಡುವೆ ಮಠಗಳ ಅಸ್ತಿತ್ವ ಅಲುಗಾಡುತ್ತಿದೆ. ಇಂಥ ಸಂದರ್ಭದಲ್ಲಿ ಧೃತಿಗೆಡತೆ ಸನ್ನಡತೆ ಬೋದಿಸುವ ಸಮಾಜದ ಕನ್ನಡಿಯಂತೆ ಇರುವ ಮಠಗಳು ಜೀವಂತವಾಗಿವೆ. ಈ ಮಠಗಳು ಮತ್ತು ಮಠಾಧೀಶರು ಇಂದಿನ ಆಧುನಿಕತೆ ತಕ್ಕಂತೆ ಮೂಲ ಸಂಸ್ಕೃತಿಯನ್ನು ತ್ಯಜಿಸದೆ' ಆಧುನಿಕತೆಯನ್ನು ತಿರಸ್ಕರಿಸಿದೆ ಎರಡರ ಸಮ್ಮಿಲನವಾಗಿ ಸಮಾಜಮುಖಿಯಾಗಿರುವುದನ್ನು ಗಮನಿಸಬಹುದು. ಏಕೆಂದರೆ ಈ ಶತಮಾನದಲ್ಲಿ ಮಠಾಧೀಪತಿಯಾಗುವುದೆಂದರೆ ತುಂಬ ಕಷ್ಟದ ಮತ್ತು ಜವಾಬ್ದಾರಿಯುತವಾದ ಕೆಲಸ ಆ ಕೆಲಸವನ್ನು ನಮ್ಮ ಯುವಮಠಾಧೀಶರ ಸಮೂಹ ಯಶಸ್ವಿಯಾಗ ಮಾಡುತ್ತ ಜನರಲ್ಲಿರುವ ಮೂಢನಂಬಿಕೆ, ಕಂದಾಚಾರಗಳನ್ನು ತಮ್ಮ ಉಪದೇಶಗಳ ಮೂಲಕ ಖಂಡಿಸುತ್ತ, ಶರಣರ ಆದರ್ಶ ಮೌಲ್ಯಗಳನ್ನು ಜನರ ಮನಸ್ಸಿನಲ್ಲಿ ಬೆಳೆಸುತ್ತಿವೆ. ಕಾಯಕದ ಪರಿಕಲ್ಪನೆ ಮತ್ತು ದಾಸೋಹದ ಪರಿಕಲ್ಪನೆಯನ್ನು ಇಂದಿಗೂ ಜೀವಂತವಾಗಿರಿಸಿಕೊಂಡು ಧರ್ಮ ಸಂಸ್ಕೃತಿ–ಕಲೆಗಳಿಗೆ ಪ್ರೋತ್ಸಾಹ ನೀಡುತ್ತ ವೀರಶೈವ ಸಮಾಜದ ಜೊತೆಗೆ ನಾಗರಿಕ ಸಮಾಜದ ಅವಿಭಾಜ್ಯ ಅಂಗವಾಗಿದೆ ಎಂದರೆ ಅದು ಆಶ್ಚರ್ಯವಾಗುವುದಿಲ್ಲ.

ಕೊನೆಯದಾಗಿ ಇಡೀ ಮಠಗಳ ಅಧ್ಯಯನ ಮಾಡಿದಾಗ ಕಂಡಂತ ಸೂಕ್ಷ್ಮ ವಿಚಾರ ಎಂದರೆ ಮಠಗಳು ನಿಂತ ನೀರಲ್ಲ ಹರಿಯುವ ನೀರು ಕಾಲಕ್ಕೆ ತಕ್ಕಂತೆ ಬದಲಾವಣೆ ಹೊಂದುತ್ತಿರುವುದನ್ನು ಗಮನಿಸಿದ್ದೆವೆ.ಆದರೆ ಪ್ರಸ್ತುತ ಜಾಗತೀಕರಣದ ಸನ್ನಿವೇಶದಲ್ಲಿ ಸಮಾನತೆ ಸಾರುವ ಮಠಗಳು ತಮ್ಮ ಮೂಲ ಸ್ವರೂಪದಲ್ಲಿ ಇನ್ನೂ ಹೆಚ್ಚಿನ ಬದಲಾವಣೆ ಕಾಣಬೇಕಾಗಿದೆ. ಪ್ರಮುಖವಾಗಿ ನಾನು ಅಧ್ಯಯನ ಮಾಡಿದ ಯಾವುದೇ ಮಠಗಳಲ್ಲಿ ಮಹಿಳಾ ಪೀಠಾಧಿಪತಿಗಳಿಲ್ಲದಿರುವುದು ಕಂಡು ಬಂದಿದೆ. ಮಠಗಳು ಸಾರ್ವಜನಿಕ, ಸಾಮಾಜಿಕ ಜೀವನದಲ್ಲಿ

ಬೆರೆತು ಹೋಗಿರುವುದರಿಂದ ಸ್ಥಾನಮಾನ ನೀಡುವ ವಿಚಾರದಲ್ಲಿ ಸಮಾನತೆ ಸಾರುವಂತಿರಬೇಕು. ಈಗಿನವರು ತುಂಬ ಜಾಣ್ಮೆ ಮತ್ತು ವಿಶಾಲ ಮನೋಭಾವನೆ ಹೊಂದಿರುವವರಾಗುವುದರ ಜೊತೆಗೆ ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಇತರೆ ಹಿಂದುಳಿದ, ತಳಸಮುದಾಯದ ಜಾತ್ಯತೀತ ವ್ಯಕ್ತಿಗಳನ್ನು ಮತ್ತು ಮಹಿಳೆಯರನ್ನು ತಮ್ಮ ಮಠಗಳಿಗೆ ಪೀಠಾಧೀಪತಿಗಳನ್ನಾಗಿ ಮಾಡುವುದರ ಮೂಲಕ ಮಠಗಳ ಮೂಲ ಧ್ಯೆಯವಾದ ಸಾಮಾಜಿಕ ನ್ಯಾಯ ಪಾಲನೆಗೆ ಅವಕಾಶ ಕಲ್ಪಿಸಬೇಕಾಗಿರುವುದು ಇಂದಿನ ಮಠಗಳ ಆಧ್ಯ ಕರ್ತವ್ಯ ಎಂಬುದನ್ನು ತಿಳಿಸಲು ಇಚ್ಚಿಸುತೇನೆ.

ನನ್ನ ಅಧ್ಯಯನದ ದೃಷ್ಟಿಯಿಂದ ಸಮಗ್ರ ಎನಿಸಿದರೂ ಸಂಕ್ಷಿಪ್ತತೆ ಅನಿಸುತ್ತದೆ. ಏಕೆಂದರೆ ಮಠಗಳ ಆಳವನ್ನು ಅಧ್ಯಯನ ಮಾಡಿದಷ್ಟು ವಿಷಯ ಲಭ್ಯತೆ ದೊರುಕುತ್ತದೆ. ಒಂದೊಂದು ಮಠವು ಒಂದೊಂದು ಸಂಶೋಧನೆ ಮಾಡುವಷ್ಟು ವಿಷಯದ ವಿಸ್ತಾರವಿದೆ. ಆ ಕಾರಣದಿಂದ ಈ ಮಹಾಪ್ರಬಂಧದದಲ್ಲಿ 'ಕಿರಿದಲ್ಲಿ ಪಿರಿದೆಂಬಂತೆ' ಜಿಲ್ಲೆಯ ಎಲ್ಲಾ ವೀರಶೈವ ಮಠಗಳ ಸೂಕ್ಷ್ಮ ಅವಲೋಕನ ಮಾಡಲಾಗಿದೆ. ಮುಂದೆ ಒಂದೊಂದು ತಾಲ್ಲೂಕಿನ ಮಠಗಳನ್ನು ಕುರಿತು ಅಧ್ಯಯನ ಮಾಡಲು ಈ ಪ್ರಬಂಧ ಸಹಾಯವಾಗಬಹುದು. ಸಮಗ್ರತೆಯಲ್ಲಿ ಮಠಗಳ ಕಾರ್ಯವಿಸ್ತಾರತೆ ತುಂಬಾ ವಿಸ್ತಾರವಾಗಿದೆ. ಮುಂದೆ ನಾವು ಇಲ್ಲಿಯ ಒಂದೊಂದು ಅಧ್ಯಾಯಗಳ ಬಗೆಗೆ ಔಚಿತ್ಯ ಪೂರ್ಣವಾದ ಅಧ್ಯಯನವನ್ನು ನಡೆಸಬಹುದಾಗಿದೆ. ಈ ರೀತಿ ಪ್ರಸ್ತುತ ಅಧ್ಯಯನವು ಮೇಲ್ಕಂಡ ರೀತಿಯ ವಿಭಿನ್ನ ಬಗೆಯ ಸಂಶೋಧನೆಗಳಿಗೆ ದಿಕ್ಸೂಚಿಯಾಗಬಲ್ಲದು ಎಂಬ ಆಶಾಭಾವನೆ ಈ ಪ್ರಬಂಧದಲ್ಲಿ ಅಡಕವಾಗಿದೆ.

ಈ ಮೇಲ್ಕಂಡ ಅಧ್ಯಯನದಿಂದ ಮೈಸೂರು ಜಿಲ್ಲೆಯ ಏಳು ತಾಲ್ಲೂಕುಗಳ ವೀರಶೈವ ಮಠಗಳನ್ನು ಕುರಿತಾದ ಸಾಂಸ್ಕೃತಿಕ ಅಧ್ಯಯನಕ್ಕೆ ಪೂರ್ಣ ಪ್ರಮಾಣದ ಸಹಾಯವನ್ನು ಮಾಡಿದಂತಹ, ಸಹಕಾರ ನೀಡಿದಂತಹ ಮತ್ತು ಈ ಮಹಾಪ್ರಬಂಧ ರಚನೆಯಾಗಲು ಆರ್ಶೀವಾದಿಸಿದಂಥ ಗುರು–ಹಿರಿಯರು, ಎಲ್ಲಾ ಮಠಾಧೀಶರು, ಭಕ್ತರು ಹಾಗೂ ಸೂಕ್ತ ಕಾಲದಲ್ಲಿ ಮಾರ್ಗದರ್ಶಕ ನೀಡಿದವರು ಮತ್ತು ಈ ರೀತಿ ಪ್ರಬಂಧ ಮೂಡಿಬರಲು ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ಕಾರಣರಾದ ಎಲ್ಲರ ಹಾರೈಕೆಯ ಫಲವೆ ಈ ಪ್ರಬಂಧ. ಈ ಪ್ರಬಂಧ ಮುಂದೆ ಮಠಗಳ ಬಗ್ಗೆ ಅಧ್ಯಯನ ಮಾಡುವವರ ಗಮನವನ್ನು ಸ್ವಲ್ಪ ಮಟ್ಟಿಗಾದರೂ ಸೆಳೆದರೆ, ನಾನು ಈ ಸಂಶೋಧನೆಯನ್ನು ಕೈಗೊಂಡಿದ್ದಕ್ಕೆ ಸಾರ್ಥಕತೆ ಎಂದು ಭಾವಿಸುತ್ತೇನೆ.